## ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ7[3]ಪ್ರಾಶಿಅ:ಹೆ.ಶಿ.ವೇ.ಪಾ:173:2019-20 ದಿನಾಂಕ:06ನೇ ಡಿಸೆಂಬರ್ 2021

10-12-2021

### : ಸುತ್ತೋಲೆ :

**ವಿಷಯ**: ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟ ಶಿಕ್ಷಕರಿಗೆ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ**: ಸರ್ಕಾರದ ಸುತ್ತೋಲೆ ಸಂ:ಇಡಿ:104:ಪಿಎಂಸಿ:2008, ದಿ:25.08.2008.
2] ಸರ್ಕಾರದ ಆದೇಶ ಸಂಖ್ಯೆ:ಇಡಿ:104:ಪಿಎಂಸಿ:2008, ದಿ:23.06.2008.
3] ರಿಟ್ ಅರ್ಜಿ ಸಂಖ್ಯೆ:25698/2005, ದಿನಾಂಕ:27.06.2006.
4] ರಿಟ್ ಅಪೀಲ್ ಸಂಖ್ಯೆ:2143/2006, ದಿ:11.01.2007
5] ನಿಂದನಾ ದಾವೆ ಸಂಖ್ಯೆ:ಸಿ.ಸಿ.ಸಿ:653/2020, ದಿ:06.01.2021.
6] ಸರ್ಕಾರದ ಆದೇಶ ಸಂಖ್ಯೆ:ಇಪಿ:220:ಪಿಎಂಸಿ:2021, ದಿ:17.11.2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುದಾನಿತ ಪ್ರಾಥಮಿಕ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಸಮಯದಲ್ಲಿ ವಿಧಿಸಿದ್ದ ಷರತ್ತುಗಳಂತೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಕಾಪಾಡಿಕೊಳ್ಳುವುದು ಮತ್ತು ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ಎಂದು ಷರತ್ತುವಿಧಿಸಿ, ಶಿಕ್ಷಕರನ್ನು ಹಾಗೂ ಶಾಲೆಯನ್ನು ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ.

ಪ್ರಥಮವಾಗಿ ಅನುದಾನ ರಹಿತ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿದಾಗ ಸದರಿ ಶಾಲೆಯು ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತದೆ ಎಂಬ ಆಶಯದೊಂದಿಗೆ ಸದರಿ ಶಾಲೆಯನ್ನು ನೋಂದಾಯಿಸಲಾಗಿರುತ್ತದೆ. ಹಾಗೂ ಮಾನ್ಯತೆಯನ್ನೂ ಸಹ ನೀಡಲಾಗಿರುತ್ತದೆ. ಸದರಿ ಶಾಲೆಯು ಉತ್ತಮವಾಗಿ ಹಲವಾರು ವರ್ಷ ನಿರಂತರವಾಗಿ ಉತ್ತಮ ಗುಣಮಟ್ಟ ಶಿಕ್ಷಣ ಹಾಗೂ ಮಕ್ಕಳ ಸಂಖ್ಯೆಯನ್ನು ನಿಯಮಿತವಾಗಿ ಸ್ಥಿರೀಕರಿಸಿದ ಶಾಲೆಗಳಿಗೆ ಸಹಾಯಾನುದಾನಕ್ಕೆ ಒಳಪಡಿಸಲಾಗುತ್ತದೆ. ಈ ಶಾಲೆಯಲ್ಲಿ ಅನುದಾನ ರಹಿತ ಶಿಕ್ಷಕರಾಗಿ ಅನುಮೋದನೆ ಹೊಂದಿ, ನಿರಂತರ ಕರ್ತವ್ಯ ನಿರ್ವಹಿಸಿದ ಶಿಕ್ಷಕರನ್ನು ನಿಯಮಾನುಸಾರ ವೇತನಾನುದಾನಕ್ಕಾಗಿ ಒಳಪಡಿಸಲಾಗುತ್ತದೆ. ಸದರಿ ಶಾಲೆಯು ನಿರಂತರವಾಗಿ ಗುಣಮಟ್ಟದ ಶಿಕ್ಷಣ ಹಾಗೂ ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ಕಡಿಮೆ ಇಲ್ಲದಂತೆ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೊಂದಬೇಕಾಗಿರುತ್ತದೆ.

ಈ ಶಾಲೆಯ ಶಿಕ್ಷಕರ ನೇಮಕಾತಿಯನ್ನು ಸಂಬಂಧಪಟ್ಟ ಆಡಳಿತ ಮಂಡಳಿಯು ನೇಮಕಾತಿ ಮಾಡಿಕೊಂಡಿದ್ದು, ಅವರ ಶಿಸ್ತುಪ್ರಾಧಿಕಾರವು ಹಾಗೂ ಇತರೆ ಆಡಳಿತಾತ್ಮಕ ಪ್ರಾಧಿಕಾರವು ಆಡಳಿತ ಮಂಡಳಿಯೇ ಆಗಿರುತ್ತದೆ. ಸರ್ಕಾರವು ಉತ್ತಮ ಶಿಕ್ಷಣ ಹಾಗೂ ಮಕ್ಕಳ ಮತ್ತು ಶಿಕ್ಷಕರ ಅನುಪಾತ [40:01] ಇದ್ದಲ್ಲಿ ಮಾತ್ರ ವೇತನಾನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.

2000 ರಿಂದ 2008ರ ಅವಧಿಯಲ್ಲಿ ರಾಜ್ಯದ ಅನೇಕ ಅನುದಾನಿತ ಶಾಲೆಗಳಲ್ಲಿ ಮಕ್ಕಳ ಮತ್ತು ಶಿಕ್ಷಕರ ಅನುಪಾತವು [40:01]ಗಿಂತ ಕಡಿಮೆಯಾಗಿರುವುದರಿಂದ ಆ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲಾಗಿತ್ತು. ಈ ಶಿಕ್ಷಕರುಗಳಿಗೆ ಈಗಾಗಲೇ ವಿಧಿಸಿದ ಷರತ್ತಿನಂತೆ ವೇತನ ಪಾವತಿ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲದೇ ಇರುವುದರಿಂದ ಅವರುಗಳಿಗೆ ವೇತನವನ್ನು ತಡೆಹಿಡಿಯಲಾಗಿತ್ತು. ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ-1983

ನಿಯಮಗಳು, 2001ರಲ್ಲಿ ತಂದಿರುವ ನಿಯಮಗಳ [RECRUITMENT AND TERMS AND CONDITIONS OF SERVICE OF EMPLOYEES IN PRIVATE AIDED PRIMARY AND SECONDARY EDUCATIONAL INSTITUTIONS (RULES,1999)]ರ ಅನ್ವಯ ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಎಲ್ಲಾ ಸೇವಾ ಸವಲತ್ತುಗಳನ್ನು ಆಡಳಿತ ಮಂಡಳಿಯು ನೀಡತಕ್ಕದ್ದು. ಹಾಗೂ ಇಲಾಖೆಯು ವಿಧಿಸಿರುವ ಷರತ್ತಿಗೆ ಅನುಗುಣವಾಗಿ ಶಾಲೆಯಲ್ಲಿ ಬೋಧನಾ ಕಾರ್ಯವನ್ನು ಹಾಗೂ ಮಕ್ಕಳ ಮತ್ತು ಶಿಕ್ಷಕರ ಅನುಪಾತವನ್ನು ಕಾಯ್ದುಕೊಳ್ಳುವುದು ಆಡಳಿತ ಮಂಡಳಿಯ ಹಾಗೂ ಆ ಶಾಲೆಯ ಶಿಕ್ಷಕರ ಕರ್ತವ್ಯವಾಗಿರುತ್ತದೆ.

ಒಂದುವೇಳೆ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕುಂಠಿತವಾದಲ್ಲಿ ಅವುಗಳನ್ನು ಸರಿಪಡಿಸುವುದು ಉತ್ತಮಗೊಳಿಸುವುದು ಆಡಳಿತ ಮಂಡಳಿ ಮತ್ತು ಶಿಕ್ಷಕರ ಹೊಣೆಗಾರಿಕೆಯಾಗಿರುತ್ತದೆ. ಅದರಂತೆ, ಸದರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದ್ದಲ್ಲಿ ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಮೇಲೆ ತಿಳಿಸಿರುವ ನಿಯಮ-10ರಲ್ಲಿ ತಿಳಿಸಿರುವಂತೆ ಆಡಳಿತ ಮಂಡಳಿಯು ಕರ್ತವ್ಯದಿಂದ ವಜಾ ಮಾಡಬೇಕಾಗುತ್ತದೆ. ಅವುಗಳಿಗೆ ಕೆಲವೊಂದು ಮಾರ್ಗಸೂಚಿಯನ್ನು ಸಹ ನೀಡಲಾಗಿರುತ್ತದೆ.

ಆದರೆ, ಸರ್ಕಾರವು ಮಾನವೀಯ ದೃಷ್ಟಿಯಿಂದ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯಿಂದ ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ಕಡಿಮೆಯಾಗಿದ್ದಲ್ಲಿ ಅಂತಹ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ, ಅಂತಹವರನ್ನು ಬೇರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸ್ಥಳ ನಿಯೋಜಿಸಲು ಆಡಳಿತ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ, ಆಡಳಿತ ಮಂಡಳಿಗಳು ಸರ್ಕಾರದ ಮಾರ್ಗದರ್ಶನದಂತೆ 2008ರವರೆಗೆ ವಿಳಂಬ ಮಾಡಿದ ಹಿನ್ನೆಲೆಯಲ್ಲಿ ಹೆಚ್ಚುವರಿ ಶಿಕ್ಷಕರನ್ನು ಕಾರ್ಯಭಾರ ಇರುವ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಸಾಧ್ಯವಾಗಿರುವುದಿಲ್ಲ.

ಸದರಿ ಶಿಕ್ಷಕರುಗಳು ಕಾರ್ಯಭಾರವಿಲ್ಲದೇ ಅದೇ ಶಾಲೆಯಲ್ಲಿ ಮುಂದುವರೆದಿದ್ದು, ಅಂತಹ ಶಿಕ್ಷಕರನ್ನು ಗುರುತಿಸಿ ವೇತನವನ್ನು ತಡೆಹಿಡಿಯಲಾಗಿರುತ್ತದೆ. ಈ ಶಿಕ್ಷಕರು ಹಾಗೂ ಆಡಳಿತ ಮಂಡಳಿಗಳ ಮನವಿಯ ಮೇರೆಗೆ 2008ರಲ್ಲಿ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟ ಶಿಕ್ಷಕರನ್ನು ಮಾನವೀಯತೆಯ ಹಿತ ದೃಷ್ಟಿಯಿಂದ ಸದರಿ ಶಿಕ್ಷಕರುಗಳನ್ನು ಕಾರ್ಯಭಾರವಿರುವ ಅನುದಾನಿತ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಹಾಗೂ ಕರ್ತವ್ಯ ನಿರ್ವಹಿಸಿದ ಅವಧಿಗೆ ವೇತನವನ್ನು ಪಾವತಿ ಮಾಡಲಾಗುತ್ತಿದೆ. ಈ ಮಧ್ಯೆ ಅನೇಕ ಅನುದಾನಿತ ಶಾಲೆಯ ಶಿಕ್ಷಕರು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟು ಅದೇ ಶಾಲೆಯಲ್ಲಿ ಕಾರ್ಯಭಾರವಿಲ್ಲದ 2000 ರಿಂದ 2008 ರವರೆಗಿನ ತಡೆಹಿಡಿದಿರುವ ವೇತನವನ್ನು ಪಾವತಿ ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ಸರ್ಕಾರವು ಕಾರ್ಯಭಾರವಿಲ್ಲದ ಅವಧಿಗೆ ವೇತನ ಪಾವತಿ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿ ಹಿಂಬರಹ ನೀಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಿಂಬರಹವನ್ನು ನೀಡಿರುತ್ತಾರೆ.

ಉಪನಿರ್ದೇಶಕರು ನೀಡಿರುವ ಹಿಂಬರಹದಂತೆ ಹೆಚ್ಚುವರಿ ಶಿಕ್ಷಕರು ರಾಜ್ಯ ಉಚ್ಛ ನ್ಯಾಯಾಲಯಗಳಲ್ಲಿ ದಾವೆ ಹೂಡಿದ್ದು ಸದರಿ ದಾವೆಯನ್ನು ವಿಚಾರಣೆ ನಡೆಸಿದ ಮಾನ್ಯ ನ್ಯಾಯಾಲಯವು ತೀರ್ಪು ನೀಡಿರುತ್ತದೆ. ಅದರಂತೆ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಸರ್ಕಾರವು ಮೇಲ್ಮನವಿಯನ್ನು ಉಲ್ಲೇಖ (4)ರಲ್ಲಿ ಸಲ್ಲಿಸಿದ್ದು ಸದರಿ ದಾವೆಯಲ್ಲಿ ಕಾರ್ಯಭಾರವಿಲ್ಲದೆ ಕರ್ತವ್ಯ ನಿರ್ವಹಿಸಿದ ಅವಧಿಗೆ ವೇತನ ಪಾವತಿ ಮಾಡಲು ಅವಕಾಶವಿಲ್ಲವೆಂದು ತಿಳಿಸಿ ಆದೇಶಿಸಿರುತ್ತದೆ. ಅದರಂತೆ ಮತ್ತೊಂದು ದಾವೆಯಲ್ಲಿ ನಿಂದನಾ ದಾವೆಯನ್ನು ಹೂಡಲಾಗಿದ್ದು ಉಲ್ಲೇಖ (5)ರ ನಿಂದನಾದಾವೆಯಲ್ಲಿ ಉಲ್ಲೇಖ (4)ರ ಆದೇಶವನ್ನು ಮಾನ್ಯ ಮಾಡಿ ದಾವೆಯನ್ನು ವಜಾ ಮಾಡಿರುತ್ತದೆ. ಹಾಗೂ ಉಲ್ಲೇಖ (6)ರ ಸರ್ಕಾರಿ ಆದೇಶದಲ್ಲಿಯೂ ಸಹಾ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟ ಶಿಕ್ಷಕರು ಕಾರ್ಯಭಾರವಿಲ್ಲದೆ ಅದೇ ಶಾಲೆಯಲ್ಲಿ 2000 ರಿಂದ 2008ರವರೆಗೆ ಕರ್ತವ್ಯ ನಿರ್ವಹಿಸಿದ್ದಲ್ಲಿ ಸದರಿ ಶಿಕ್ಷಕರಿಗೆ ವೇತನ ಪಾವತಿ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿಳಿಸಿರುತ್ತದೆ. ಅದರಂತೆ ಮಾನ್ಯ ನ್ಯಾಯಾಲಯದ ಉಲ್ಲೇಖ (4) ಮತ್ತು (5)ರ ಆದೇಶ ಹಾಗೂ ಸರ್ಕಾರದ ಉಲ್ಲೇಖ (6) ರ ಆದೇಶದಂತೆ 2000 ರಿಂದ 2008ರವರೆಗೆ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟ ಶಿಕ್ಷಕರಿಗೆ ಈ ಅವಧಿಯ ಬಾಕಿ ವೇತನವನ್ನು

ಪಾವತಿ ಮಾಡಲು ಅವಕಾಶವಿರುವುದಿಲ್ಲವೆಂದು ಎಲ್ಲಾ ಶಿಕ್ಷಕರಿಗೂ ಹಿಂಬಹರ ನೀಡಲು ಉಪನಿರ್ದೇಶಕರು [ಆಡಳಿತ] ಇವರಿಗೆ ಸೂಚಿಸಿದೆ.

ತಮ್ಮ ಜಿಲ್ಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟ ಶಿಕ್ಷಕರು ಬಾಕಿ ವೇತನದ ಬಗ್ಗೆ ನ್ಯಾಯಾಲಯಗಳಲ್ಲಿ ದಾವೆ ಹೂಡಿದ್ದಲ್ಲಿ ಈಗಾಗಲೇ ಉಲ್ಲೇಖ (4) ಮತ್ತು (5)ರ ನ್ಯಾಯಾಲಯಗಳ ಆದೇಶಗಳನ್ನು ನ್ಯಾಯಾಲಯದ ಗಮನಕ್ಕೆ ತಂದು ದಾವೆಯನ್ನು ವಜಾ ಮಾಡಲು ಕ್ರಮವಹಿಸತಕ್ಕದ್ದು. ಒಂದು ವೇಳೆ ಶಿಕ್ಷಕರು ನ್ಯಾಯಾಲಯದ ಆದೇಶವನ್ನು ತಂದಿದ್ದಲ್ಲಿ ಮೇಲಿನ ನ್ಯಾಯಾಲಯಗಳ ಆದೇಶದಂತೆ ಅವುಗಳನ್ನು ಪರಿಗಣಿಸಲು ಬರುವುದಿಲ್ಲವೆಂಬ ಬಗ್ಗೆ ಹಿಂಬರಹ ನೀಡತಕ್ಕದ್ದು.

ಒಂದು ವೇಳೆ ಸೂಕ್ತ ಕ್ರಮವಹಿಸಲು ವಿಫಲರಾದಲ್ಲಿ ಹಾಗೂ ಈ ಬಗ್ಗೆ ನ್ಯಾಯಾಲಯ ಪ್ರಕರಣಗಳಾದಲ್ಲಿ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಅಂತಿಮವಾಗಿ ಸೂಚನೆ ನೀಡಿದೆ. ಇಂತಹ ಪ್ರಕರಣಗಳನ್ನು ಪ್ರಥಮ ಆದ್ಯತೆ ಮೇರೆಗೆ ಸೂಕ್ತ ಹಿಂಬರಹ ನೀಡಲು ಸಂಬಂಧಪಟ್ಟ ಉಪನಿರ್ದೇಶಕರು [ಆಡಳಿತ] ಇವರಿಗೆ ಸೂಚಿಸಿದೆ.

**ಮಾನ್ಯ ಆಯುಕ್ತರಿಂದ ಅನುಮೋದಿಸಿದೆ**

*ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)*

***ಇವರಿಗೆ:***

***01.*** ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ].

***02.*** ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

***ಪ್ರತಿಯನ್ನು:***

***03.*** ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು, ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

***04.*** ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ.

***05.*** ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲ್ಬುರ್ಗಿ.

***06.*** ನಿರ್ದೇಶಕರು [ಪ್ರೌಢ ಶಿಕ್ಷಣ] ಮತ್ತು ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ನಿರ್ದೇಶನಾಲಯ, ಬೆಂಗಳೂರು.

***07.*** ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸುವುದು.

***08.*** ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಖಾಸಗಿ ಅನುದಾನಿತ ಶಾಲೆಗಳಲ್ಲಿ 2000 ರಿಂದ 2009ರವರೆಗೆ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟ ಶಿಕ್ಷಕರಿಗೆ ಆ ಅವಧಿಯ ವೇತನವನ್ನು ಪಾವತಿ ಮಾಡುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರದ ಆದೇಶ ಸಂಖ್ಯೆ:ಇಡಿ.200ಪಿಎಂಸಿ.99. ದಿನಾಂಕ:9-6-2005
2. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.4.ಪಿಎಂಸಿ.2008, ದಿನಾಂಕ:25-8-2008
3. ಸರ್ಕಾರದ ಆದೇಶ ಸಂಖ್ಯೆ:ಇಡಿ.104.ಪಿಎಂಸಿ.2008, ದಿನಾಂಕ23-6-2004.
4. ಆದೇಶ ಸಂಖ್ಯೆ ಇಡಿ 28 ಪಿಎಂಸಿ 2020, ದಿನಾಂಕ:4-12-2020
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಸಿ7(3)ಹೆ.ಶಿ.ವೇ.ಪಾ:173:2019-2020.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು 2000 ರಿಂದ 2009ರ ಅವಧಿಯಲ್ಲಿ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಕೊರತೆಯಿಂದ ಮಕ್ಕಳ ಮತ್ತು ಶಿಕ್ಷಕರ ಅನುಪಾತ 40:1 ರಂತೆ ಮಕ್ಕಳ ಸಂಖ್ಯೆಯು ಕಡಿಮೆ ಇರುವ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲ್ಪಟ್ಟಿದ್ದರೂ ಅಂತಹ ಶಿಕ್ಷಕರನ್ನು ಕಾರ್ಯಭಾರವಿರುವ ಶಾಲೆಗಳಿಗೆ ಮರುಹಂಚಿಕೆ ಮಾಡದೆ ಅವರುಗಳನ್ನು ಅದೇ ಶಾಲೆಯಲ್ಲಿ ಮುಂದುವರೆಸಿಕೊಂಡು ಬಂದಿರುವುದರಿಂದ ಇಂತಹ ಹೆಚ್ಚುವರಿ ಶಿಕ್ಷಕರಿಗೆ ಕಾರ್ಯಭಾರವಿರುವ ಶಾಲೆಗೆ ಮರುಹಂಚಿಕೆ ಮಾಡುವವರೆಗೂ ಸಹಾಯಾನುದಾನವನ್ನು ನೀಡಬಾರದೆಂದು ಕ್ರಮಾಂಕ (2) ಮತ್ತು (3)ರಲ್ಲಿ ಆದೇಶಿಸಿದೆ. ಈ ಆದೇಶವನ್ನು ಪ್ರಶ್ನಿಸಿ ಹಲವಾರು ಶಿಕ್ಷಕರು ವಿವಿಧ ನ್ಯಾಯಾಲಯಗಳಲ್ಲಿ ಹಾಗೂ ಶೈಕ್ಷಣಿಕ ಮೇಲ್ಮನವಿ ಪ್ರಾಧಿಕಾರದಲ್ಲಿ ಮನವಿ ಸಲ್ಲಿಸಿರುತ್ತಾರೆ. ನ್ಯಾಯಾಲಯಗಳು ತನ್ನ ತೀರ್ಪಿನಲ್ಲಿ ಪುನರ್ ಪರಿಶೀಲಿಸಲು ಆದೇಶಿಸಿರುತ್ತದೆ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳು ಸರ್ಕಾರದ ಆದೇಶದಂತೆ ಇತ್ಯರ್ಥಪಡಿಸಿರುತ್ತವೆ.

ಈ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು/ತೀರ್ಪುಗಳನ್ನು ಪರಿಗಣಿಸಿ ಸರ್ಕಾರವು ಕರ್ನಾಟಕ ಶಿಕ್ಷಣ ಕಾಯಿದೆ-1983 ಹಾಗೂ ತತ್ಸಂಬಂಧ ನಿಯಮಗಳನ್ನು ಪರಿಶೀಲಿಸಿ ಕಾರ್ಯಭಾರವಿಲ್ಲದೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಅನುದಾನವನ್ನು ಪಾವತಿ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲದೆ ಇರುವುದರಿಂದ ಹಾಗೂ ಸರ್ಕಾರದ ಆದೇಶ ಸಂ:ಇಡಿ 435 ಪಿಎಂಸಿ 2012, ಬೆಂಗಳೂರು ದಿನಾಂಕ: 21/05/2014ರ ಪ್ರಕಾರ ಹೆಚ್ಚುವರಿ ಶಿಕ್ಷಕರೆಂದು ಪರಿಗಣಿಸಿ, ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದ ಹಿಂದಿನ ದಿನದವರೆಗೆ ಬಾಕಿ ವೇತನ ಪಾವತಿಗೆ ಅರ್ಹರಿರುವುದಿಲ್ಲವೆಂದು ಆದೇಶಿಸಲಾಗಿದೆ. ಕರ್ನಾಟಕ ಶಿಕ್ಷಣ ಕಾಯಿದೆ-1983 ಹಾಗೂ ಖಾಸಗಿ ಅನುದಾನಸಹಿತ ಶಾಲೆಗಳ ನೌಕರರ ಸೇವಾನಿಬಂಧನೆಗಳು-1999 ಹಾಗೂ ತತ್ಸಂಬಂಧ ತಿದ್ದುಪಡಿ ನಿಯಮಗಳಂತೆ ಮಕ್ಕಳ ಶಿಕ್ಷಕರ ಅನುಪಾತವನ್ನು 40:1 ರಂತೆ ನಿಗಧಿಪಡಿಸಿರುವುದರಿಂದ ಹಾಗೂ ಈಗಾಗಲೇ ವಿವಿಧ ನ್ಯಾಯಾಲಯಗಳಿಗೆ ಮಕ್ಕಳ ಮತ್ತು ಶಿಕ್ಷಕರ ಅನುಪಾತವು 40:1 ರಂತೆ ನಿಗಧಿಪಡಿಸಿರುವುದನ್ನು ಆಕ್ಷೇಪಣೆ ಸಲ್ಲಿಸುವ ಸಂದರ್ಭದಲ್ಲಿ ಸಲ್ಲಿಸಲಾಗಿರುತ್ತದೆ.

ಸರ್ಕಾರದ ಆಕ್ಷೇಪಣೆಗಳನ್ನು ಮಾನ್ಯ ನ್ಯಾಯಾಲಯಗಳು ಮಾನ್ಯ ಮಾಡಿ ತೀರ್ಪುಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 220 ಪಿಎಂಸಿ 2021, ಬೆಂಗಳೂರು, ದಿನಾಂಕ: 17.11.2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ104 ಪಿಎಂಸಿ 2008, ದಿನಾಂಕ:25-08-2008ರ ಅನ್ವಯ 2000 ರಿಂದ 2009ರ ಅವಧಿಯಲ್ಲಿ ಹೆಚ್ಚುವರಿ ಶಿಕ್ಷಕರೆಂದು ಪರಿಗಣಿಸಿ, ಅಂತಹ ಶಿಕ್ಷಕರುಗಳನ್ನು ಕಾರ್ಯಭಾರವಿರುವ ಶಾಲೆಗಳಿಗೆ ಮರುಹಂಚಿಕೆ ಮಾಡಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಮಾತ್ರ ಅರ್ಹರಿರುತ್ತಾರೆ. ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದ ಹಿಂದಿನ ದಿನದವರೆಗೆ ಹಿಂದಿನ ಬಾಕಿ ವೇತನ ಪಾವತಿ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ

(ಹೆಚ್.ಎಸ್.ಶಿವಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಪ್ರಾಥಮಿಕ)

ಇವರಿಗೆ :

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು,

ಪ್ರತಿ:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ(ಪ್ರಾಥಮಿಕ/ಪ್ರೌಢ/ಪದವಿಪೂರ್ವ), ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಸಹಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ ಮಾಹಿತಿ ಕೇಂದ್ರ/ಹೆಚ್ಚುವರಿ ಪ್ರತಿಗಳು.